ಕೆನರಾ ಬ್ಯಾಂಕ್ Canara Bank (ಭಾರತ ಸರ್ಕಾರದ ಒಂದು ಉದ್ಯಮ)

ಹೊಂಬೇಗೌಡ ನಗರ ಶಾಖೆ
291, ಕಾಮಧೇನು ಗಾರ್ಡೇನಿಯಾ, 11ನೇ ಕ್ರಾಸ್, ವಿಲ್ಸನ್ ಗಾರ್ಡನ್ಸ್, ಬೆಂಗಳೂರು-560027.
ದೂ: 080-22225388, ಇ-ಮೇಲ್: cb1371@canarabank.com

(ಸ್ಥಿರಾಸ್ತಿ ಮಾರಾಟಕ್ಕಾಗಿ ಹರಾಜು ಮಾರಾಟ ಸೂಚನೆ)

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜನ್ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿ/ಚರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಹೊಂಬೇಗೌಡ ನಗರ ಶಾಖೆ** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ದಿನಾಂಕ: **28.03.2024** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು : **ರೂ.1,11,41,042.87/- (ರೂಪಾಯಿ ಒಂದು ಕೋಟಿ ಹನ್ನೊಂದು ಲಕ್ಷದ ನಲವತ್ತೊಂದು ಸಾವಿರದ ನಲವತ್ತೆರಡು ಮತ್ತು ಎಂಭತ್ತೇಳು ಪೈಸೆ ಮಾತ್ರ) ದಿನಾಂಕ: 21.06.2023** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಹೊಂಬೇಗೌಡ ನಗರ ಶಾಖೆ** ರವರಿಂದ **ಸಾಲಗಾರರಾದ: ಶ್ರೀ ವಾಸು ವಿ ಮತ್ತು ಶ್ರೀಮತಿ ಪದ್ಮಾ ವಿ,** ಪ್ರಸ್ತುತ ವಿಳಾಸ: ನಂ.58, Iನೇ ಮಹಡಿ, Iನೇ ಮುಖ್ಯರಸ್ತೆ, ನಂದಿನಿ ಲೇಔಟ್, ಬೆಂಗಳೂರು 560096 ಮತ್ತು C/o ವಾಸು ಮತ್ತು ಕಂಪನಿಯಲ್ಲಿ ಕವೇರಿ, 10/13 APMC ಯಾರ್ಡ್, ಯಶವಂತಪುರ, ಎಂಜಿ ಕಾಂಪ್ಲೆಕ್ಸ್ ಹತ್ತಿರ, ಬೆಂಗಳೂರು 560022.

ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇಎಂಡಿ)ಯ ವಿವರಗಳು ಕೆಳಕಂಡಂತೆ ಇರುತ್ತದೆ. ಮತ್ತು ಮುಂಗಡ ಠೇವಣಿ (ಇಎಂಡಿ)ಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಹೊಂಬೇಗೌಡ ನಗರ ಶಾಖೆ** ರವರಿಗೆ ಸಲ್ಲಿಸಬೇಕು ಅಥವಾ ಆನ್‌ಲೈನ್ ಮುಖಾಂತರ **ಖಾತೆ ಸಂಖ್ಯೆ: 209272946 (IFS Code : CNRB0001371)** ದಿನಾಂಕ 27.03.2024 ರಂದು ಸಂಜೆ 4.00 ಗಂಟೆಯೊಳಗೆ ಸಲ್ಲಿಸಬೇಕು.

ಸ್ಥಿರಾಸ್ತಿ ವಿವರ	ಮೀಸಲು ಬೆಲೆ	ಇಎಂಡಿ ಮೊತ್ತ	ಗುಣಾಂಕ ಮೊತ್ತ
ಷೆಡ್ಯೂಲ್ ಎ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಪರಿವರ್ತಿತ ಆಸ್ತಿ ನಂ.108/18, ಜಕ್ಕೂರು ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು-560064ರಲ್ಲಿದೆ. ವಿಸ್ತೀರ್ಣ ಸುಮಾರು 1 ಎಕರೆ ಮತ್ತು 37 ಗುಂಟೆಗಳನ್ನು ವಸತಿ ಪರಿವರ್ತನೆ ಆದೇಶ ಸಂಖ್ಯೆ BDS/ALN/SR/NA/195/02-03 ರ ದಿನಾಂಕ: 27.01.2003 ಬ್ಯಾಟರಾಯನಪುರ ಸಿಎಂಸಿ ಖಾತಾ ನಂ. 9/108 /B and 162/108/7B ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ಖಾಸಗಿ ಆಸ್ತಿ. **ಷೆಡ್ಯೂಲ್ ಬಿ ಆಸ್ತಿ:** ಅಪಾರ್ಟ್‌ಮೆಂಟ್ ಷೆಡ್ಯೂಲ್‌ನ ಪ್ರಕಾರ. ಇದರಲ್ಲಿ ತಿಳಿಸಲಾದ ಈ ಫ್ಲಾಟ್ ಭೂಮಾಲೀಕರು ಮತ್ತು ಡೆವಲಪರ್ ನಡುವಿನ ಜೆಡಿ ಒಪ್ಪಂದದಲ್ಲಿನ ಮಾನದಂಡಗಳು ಮತ್ತು ನಿರ್ದಿಷ್ಟತೆಯ ಪ್ರಕಾರ ಉಲ್ಲೇಖಿಸಲಾದ ಷೆಡ್ಯೂಲ್ ಎ ಯಿಂದ 750 ಚದರ ಅಡಿಗಳ ಅವಿಭಜಿತ ಪಾಲನ್ನು ಹೊಂದಿದೆ. **ಷೆಡ್ಯೂಲ್ ಸಿ ಆಸ್ತಿ:** ಫ್ಲಾಟ್ ನಂ.ಬಿ.205, 2ನೇ ಮಹಡಿ, ಬಿ ಬ್ಲಾಕ್, ಎಂಎಸ್ ಪ್ಲಾಜೋ ಷೆಡ್ಯೂಲ್ ಎ ಪ್ರಕಾರ ಆಸ್ತಿಯ ಮೇಲೆ ನಿರ್ಮಿಸಲಾದ ಮಂಜೂರಾದ ಯೋಜನೆ LP No.276/2006-07 ದಿನಾಂಕ 27.05.2006 ರ ಪ್ರಕಾರ ಬ್ಯಾಟರಾಯನಪುರ ಸಿಎಂಸಿ & ಪ್ರಸ್ತುತ ಬಿಬಿಎಂಪಿ ಖಾತಾ ನಂ.820/1/162/108/IB/51-B-205, 1770 ಚ.ಅಡಿ. ಸೂಪರ್ ನಿರ್ಮಿತ ಪ್ರದೇಶದಲ್ಲಿ ಹಾಲ್, ಕಿಚನ್, ಡೈನಿಂಗ್, 3 ಬೆಡ್‌ರೂಮ್‌ಗಳು, ಬಾತ್‌ರೂಮ್, ಬಾಲ್ಕನಿಗಳು ಇತ್ಯಾದಿಗಳನ್ನು ಒಳಗೊಂಡಿದೆ, ಎಟ್ರಿಸ್ಟೈಡ್ ಟೈಲ್ಸ್ ಫ್ಲೋರಿಂಗ್ ಮತ್ತು ಸಾಮಾನ್ಯ ಪ್ರದೇಶದ ಬಳಕೆ ಮತ್ತು ಲಭ್ಯವಿರುವ ಇತರ ಸೌಲಭ್ಯಗಳು ಮತ್ತು ವಿಶೇಷವಾದ ಒಂದು ಮುಚ್ಚಿದ ಕಾರ್ ಪಾರ್ಕಿಂಗ್ ಅನ್ನು ಒಳಗೊಂಡಿದೆ.	ರೂ. 1,32,00,000/-	ರೂ. 13,20,000/-	1.00 ಲಕ್ಷ

ಹರಾಜಿನ ದಿನಾಂಕ & ಸಮಯ: 28.03.2024 ಸಮಯ: ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ. ಮಾರಾಟ ಸೂಚನೆ ದಿನಾಂಕ: 06.03.2024
ಆಸ್ತಿ ಪರಿಶೀಲನೆ ದಿನಾಂಕ: 26.03.2024 ಸಮಯ : ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಅಥವಾ ಯಾವುದೇ ಕೆಲಸದ ದಿನದಂದು.
ಹರಾಜು ನಡೆಯುವ ಸ್ಥಳ : ಬೆಂಗಳೂರು
ಎನ್ಕುಂಬರೆನ್ಸ್ ವಿವರಗಳು ಯಾವುದಾದರೂ ಇದ್ದಲ್ಲಿ: ಬ್ಯಾಂಕ್‌ನ ಗಮನಕ್ಕೆ ಬಂದಂತೆ ಇರುವುದಿಲ್ಲ.
ಇ-ಹರಾಜಿನ ಸೇವೆಗಳನ್ನು ಒದಗಿಸುವವರ ವಿವರಗಳು : ಮೆ॥ ಅಂತಾರೆಸ್ ಸಿಸ್ಟಮ್ ಲಿಮಿಟೆಡ್, ನಂ.24 III ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು-560079, ಶ್ರೀ ಮನೋಹರ್ ಮೊ.ಸಂ: 91-9686196756.
ಹೆಚ್ಚಿನ ವಿವರಗಳಿಗಾಗಿ ಶ್ರೀ. ಅಖಿಲ್ ಅರೋರಾ, ಕೆನರಾ ಬ್ಯಾಂಕ್, ಹೊಂಬೇಗೌಡ ನಗರ ಶಾಖೆ, ಸಂಖ್ಯೆ 291 ಕಾಮಧೇನು ಗಾರ್ಡೇನಿಯಾ, 11ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು-560027 (ದೂ.9483531371) ಇ-ಮೇಲ್ ಐಡಿ: cb1371@canarabank.com.or ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಅಥವಾ ಸೇವಾ ಪೂರೈಕೆದಾರರಾದ ದಿ ಸರ್ವಿಸ್ ಪ್ರೊವೈಡರ್ ಮೆ॥ ಅಂತಾರೆಸ್ ಸಿಸ್ಟಮ್ ಲಿಮಿಟೆಡ್, ನಂ.24, III ಹಂತ 4ನೇ ಬ್ಲಾಕ್ ಬಸವೇಶ್ವರನಗರ ಬೆಂಗಳೂರು-560079, ಶ್ರೀ ಮನೋಹರ್, ಮೊಬೈಲ್ ಸಂಖ್ಯೆ: 91-9686196756.

ದಿನಾಂಕ : 06.03.2024
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸಚಿವ ತಂಗಡಗಿ ಅಭಿಮತ

ಮನುಷ್ಯನನ್ನು ಎಚ್ಚರಿಸುವ ಶಕ್ತಿ ಬರಹಕ್ಕಿದೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮನುಷ್ಯನನ್ನು ಎಚ್ಚರಿಸುವ ಶಕ್ತಿ ಏನಾದರೂ ಇದ್ದರೆ ಅದು ಬರವಣಿಗೆಗೆ ಮಾತ್ರ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅಭಿಪ್ರಾಯಪಟ್ಟರು.

ನಯನ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ಬುಧವಾರ ಆಯೋಜಿಸಿದ್ದ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲದ್ದಕ್ಕಿಂತ ಹೆಚ್ಚು ಶಕ್ತಿ ಇರುವುದು ಬರವಣಿಗೆಗೆ. ಓದಿನಿಂದ ಪರಿಪೂರ್ಣರಾಗಲು ಸಾಧ್ಯ. ಯುವ ಪೀಳಿಗೆ ಬರೆಯುವ ಹಾಗೂ ಪುಸ್ತಕ ಓದುವ ಗೀಳನ್ನು ಹೆಚ್ಚಿಸಿಕೊಳ್ಳಬೇಕು. ಆಧುನೀಕರಣದಿಂದ ಇಂದಿನ ದಿನಗಳಲ್ಲಿ ಪುಸ್ತಕ ಓದುವ ಗೀಳು ಕಡಿಮೆಯಾಗುತ್ತಿದೆ ಎಂದು ಹೇಳಿದರು.

ಪತ್ರಿಕೆಗಳಲ್ಲಿ ಬರುವ ಲೇಖನಗಳು ನಿಜ ಜೀವನಕ್ಕೆ ಸಮೀಪ ಇರುತ್ತವೆ. ದಿನ ನಿತ್ಯದ ಪತ್ರಿಕೆ ಓದದ್ದಿದ್ದರೆ ನನ್ನ ಜೀವನ ಆರಂಭವಾಗುವುದಿಲ್ಲ. ಇಲಾಖೆ ಜವಾಬ್ದಾರಿ ವಹಿಸಿಕೊಂಡ ಬಳಿಕ ನನಗೆ ಓದಿನ ಗೀಳು ಇನ್ನಷ್ಟು ಹೆಚ್ಚಾಗಿದ್ದು, ನಾನು ಒಂದಿಲ್ಲೊಂದು ದಿನ ಪುಸ್ತಕ ಬರೆಯುತ್ತೇನೆ ಅನಿಸುತ್ತಿದೆ. ಮುಂದಿನ ವರ್ಷ ಇನ್ನಷ್ಟು ಹೆಚ್ಚಿನ ಯುವ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಗುವುದು. ಯುವ ಲೇಖಕರು ಇನ್ನು ಹೆಚ್ಚಿನ ಕಾದಂಬರಿಗಳನ್ನು ರಚಿಸಲಿ. ಪುಸ್ತಕ ಪ್ರಾಧಿಕಾರದ ವತಿಯಿಂದ ಕುಮಾರ ವ್ಯಾಸಭಾರತವನ್ನು ಅತ್ಯಂತ ಕಡಿಮೆ ಬೆಲೆಗೆ ಓದುಗರಿಗೆ ತಲುಪಿಸಲು ನಿರ್ಧಾರ ಮಾಡಲಾಗಿದೆ. ಕೇವಲ 200 ರು.ಗೆ ಎರಡು ಸಂಪುಟ ಇನ್ನು ಕೆಲವೇ ದಿನಗಳಲ್ಲಿ ನಿಮಗೆ ತಲುಪಲಿದೆ ಎಂದರು.

ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, ಜನ ನಮ್ಮಿಂದ ಹೆಚ್ಚು ಜವಾಬ್ದಾರಿ ನಿರೀಕ್ಷೆ ಮಾಡುತ್ತಾರೆ. ಹಾಗಾಗಿ ಸಾಹಿತಿಗಳು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಯುವ ಲೇಖಕರು ಆತ್ಮ ವಿಶ್ವಾಸ, ಅಧ್ಯಯನಶೀಲತೆ ಬೆಳೆಸಿಕೊಳ್ಳಬೇಕು. ಬರೆಯುವ ಜತೆಗೆ ಸಾಹಿತ್ಯ ಪರಂಪರೆಯನ್ನು ತಿಳಿದುಕೊಂಡು ಅದನ್ನು ಮುಂದುವರೆಸಬೇಕು. ಕನಸ್ಸನ್ನು ಎಂದಿಗೂ ಬಿಡಬಾರದು. ಸಮಾಜದಲ್ಲಿ ಅಲ್ಪಸ್ವಲ್ಪ ಮಾರ್ಯಾದೆ ಉಳಿದುಕೊಂಡಿದ್ದರೆ, ಅದು ಸಾಹಿತಿಗಳಿಂದ. ಇಂತಹ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದರು.

ನಯನ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ಬುಧವಾರ ಆಯೋಜಿಸಿದ್ದ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಶಿವರಾಜ್ ತಂಗಡಗಿ ಪುಸ್ತಕಗಳನ್ನು ವೀಕ್ಷಿಸಿದರು.

> ಪುಸ್ತಕ ಪ್ರಾಧಿಕಾರದ ವತಿಯಿಂದ ಯುವ ಲೇಖಕರಿಗೆ ಧನ ಸಹಾಯ ನೀಡಿ ಪುಸ್ತಕ ಹೊರ ತರುತ್ತಿರುವುದು ಒಳ್ಳೆಯ ಕೆಲಸ. ಆಧುನಿಕ ಯುಗದಲ್ಲಿ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗಿದೆ. ಯಾವ ಲೇಖಕ ಕೂಡ ಪರಿಪೂರ್ಣ ಅಲ್ಲ. ಬರೆಯುತ್ತಾ ಬರೆಯುತ್ತಾ ಪೂರ್ಣನಾಗುತ್ತಾನೆ.
>
> **- ಜೋಗಿ**
> **ಕನ್ನಡಪ್ರಭ ಪುರವಣಿ ಸಂಪಾದಕ**

ಇಲಾಖೆ ಕೊಟ್ಟಾಗ ಹೆದರಿದ್ದೆ

ಸಚಿವನಾದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯಪಾಲರಿಗೆ ಖಾತೆ ಪಟ್ಟಿಯನ್ನು ಕಳುಹಿಸುವ ಸಂದರ್ಭದಲ್ಲಿ ನನ್ನನ್ನು ಕರೆದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ನೀಡಿರುವುದಾಗಿ ಹೇಳಿದ್ದರು. ಆ ವಿಷಯ ಕೇಳಿ ನಾನು ಆತಂಕಕ್ಕೆ ಒಳಗಾದೆ. ಸಾಹಿತ್ಯದ ಗಂಧ ಗಾಳಿ ಗೊತ್ತಿಲ್ಲ. ನನ್ನ ಮೇಲೆ ನಿಮಗೆ ಸಿಟ್ಟು ಇದೆಯೇ ಸರ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೇಳಿದೆ. ಸಾಹಿತಿಗಳ ಜತೆ ನಿರ್ವಹಣೆ ಅಸಾಧ್ಯ ಎಂದು ಭಾವಿಸಿದ್ದೆ. ಇದೀಗ ಇಲಾಖೆ ಜವಾಬ್ದಾರಿ ತೃಪ್ತಿ ತರಿಸಿದೆ. ಮುಂದಿನ ದಿನಗಳಲ್ಲಿ ಇಲಾಖೆಯಲ್ಲಿ ಇನ್ನಷ್ಟು ವಿನೂತನವಾಗಿ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಭಿಕ್ಷಾಟನೆ ಜಾಗಕ್ಕೆ ಇಬ್ಬರು ಮಹಿಳೆಯರ ಕಿತ್ತಾಟ

ಬೆಂಗಳೂರು: ನಗರದಲ್ಲಿ ಭಿಕ್ಷಾಟನೆ ಜಾಗಕ್ಕೆ ವಿಚಾರವಾಗಿ ಇಬ್ಬರು ಮಹಿಳೆಯರ ನಡುವೆ ಗಲಾಟೆ ಆಗಿದ್ದು, ದೂರು ನೀಡಲು ಹೊಯ್ಸಳ ವಾಹನ ಸಿಬ್ಬಂದಿ ಜತೆಗೆ ಮಾತನಾಡಿರುವ ಆಡಿಯೊ ಇದೀಗ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಡಿಜೆ ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮೋರ್ ಶಾಪಿಂಗ್ ಮಾಲ್ ಬಳಿ ಭಿಕ್ಷೆ ಬೇಡುವ ಪರ್ವಿನ್ ಎಂಬ ಮಹಿಳೆಯಿಂದ ಪೊಲೀಸ್ ಕಂಟ್ರೋಲ್ ರೂಮ್ 112ಗೆ ಕಾಲ್ ಮಾಡಿದ್ದಾರೆ. ನಾನು ಕುಳಿತುಕೊಂಡು ಭಿಕ್ಷೆ ಬೇಡಬೇಕು. ಅವಳು ಕೂರುವ ಜಾಗದಲ್ಲಿ ನಾನು ಕುಳಿತರೇ ಅವರ ಕಡೆಯವರನ್ನು ಕರೆಸಿ ಹೊಡೆಸುತ್ತಾಳೆ. ದಯವಿಟ್ಟು ಸ್ಥಳಕ್ಕೆ ಬಂದು ಭಿಕ್ಷೆ ಬೇಡುವ ಮಹಿಳೆಗೆ ಸ್ವಲ್ಪ ಹೆದರಿಸಿ ಸರ್ ಎಂದು ಭಿಕ್ಷೆ ಬೇಡುವ ಮಹಿಳೆ ಪರ್ವಿನ್ ಹೇಳಿದ್ದಾರೆ.

ನಾನು ಆ ಜಾಗದಲ್ಲಿ ಕುಳಿತು ಭಿಕ್ಷೆ ಬೇಡಬೇಕು ಎಂದ ಪರ್ವಿನ್‌ಗೆ ಉತ್ತರಿಸಿದ ಪೊಲೀಸ್ ಸಿಬ್ಬಂದಿ ನಿಮಗೆ ಒಂದು ವಾರ ಅವರಿಗೆ ಒಂದು ವಾರ ಭಿಕ್ಷೆ ಬೇಡಲು ಅವಕಾಶ ಮಾಡಿಕೊಡುವುದಾಗಿ ಸಮಾಧಾನ ಪಡಿಸಿದ್ದಾರೆ. ಸದ್ಯ ಹೊಯ್ಸಳ ವಾಹನ ಸಿಬ್ಬಂದಿಯೊಂದಿಗೆ ಭಿಕ್ಷೆ ಬೇಡುವ ಮಹಿಳೆ ಪರ್ವಿನ್ ಮಾತನಾಡಿರುವ ಆಡಿಯೊ ವೈರಲ್ ಆಗಿದೆ.

ಉಡುಗೊರೆ ನೀಡದಿದ್ದಕ್ಕೆ ಪತಿಗೆ ಚಾರುವಿನಿಂದ ಇರಿತ

ಬೆಂಗಳೂರು: ಪ್ರತಿ ವರ್ಷದಂತೆ ಈ ಸಲವೂ ವಿವಾಹ ವಾರ್ಷಿಕೋತ್ಸವಕ್ಕೆ ಉಡುಗೊರೆ ಕೊಡಲಿಲ್ಲ ಎಂಬ ಕಾರಣಕ್ಕೆ ಮಲಗಿದ್ದ ಪತಿಗೆ ಆತನ ಪತ್ನಿ ಚಾಕುವಿನಿಂದ ಇರಿದ ಘಟನೆ ಫೆ. 27ರ ರಾತ್ರಿ ಬೆಳ್ಳಂದೂರಿನ ಜುನ್ನಸಂದ್ರದಲ್ಲಿ ನಡೆದಿದೆ. 37 ವರ್ಷದ ಗಾಯಾಳು ಪತಿಯ ಹೇಳಿಕೆ ಆಧರಿಸಿ, ಆತನ 35 ವರ್ಷ ವಯಸ್ಸಿನ ಪತ್ನಿಯ ವಿರುದ್ಧ ಬೆಳ್ಳಂದೂರು ಠಾಣಾ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ. ದೂರುದಾರ ವ್ಯಕ್ತಿಯೂ ಜುನ್ನಸಂದ್ರದಲ್ಲಿ ಪತ್ನಿ ಹಾಗೂ ಮಗುವಿನೊಂದಿಗೆ ವಾಸವಿದ್ದರು. ಪ್ರತಿವರ್ಷ ವಿವಾಹ ವಾರ್ಷಿಕೋತ್ಸವದ ದಿನ ಪತ್ನಿಗೆ ಏನಾದರೂ ಉಡುಗೊರೆ ನೀಡುತ್ತಿದ್ದೆ. ಆದರೆ, ಈ ವರ್ಷ ನನ್ನ ತಾತ ನಿಧನರಾಗಿದ್ದರಿಂದ ಹಿಂದಿನ ದಿನ ಉಡುಗೊರೆ ಖರೀದಿಸಲು ಸಾಧ್ಯವಾಗಿರಲಿಲ್ಲ. ಅದೇ ಕೋಪದಲ್ಲಿದ್ದ ಪತ್ನಿ, ನಾನು ನಿದ್ದೆಗೆ ಜಾರಿದ್ದ ಸಮಯದಲ್ಲಿ ರಾತ್ರಿ 1.30ರ ಸುಮಾರಿಗೆ ಚಾಕುವಿನಿಂದ ಇರಿದಿದ್ದಾಳೆ ಎಂದು ಪತಿ ಪೊಲೀಸರೆದುರು ಹೇಳಿಕೆ ನೀಡಿದ್ದಾರೆ.

ಇರಿತದಿಂದ ಪತಿಯ ಕೈಗೆ ಗಾಯವಾಗಿದೆ. ಕೂಡಲೇ ಸ್ಥಳೀಯರ ಸಹಾಯದಿಂದ ದೂರುದಾರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಾಕು ಇರಿತ ಪ್ರಕರಣವಾದ್ದರಿಂದ ಆಸ್ಪತ್ರೆಯ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಅದರನ್ವಯ ಗಾಯಾಳುವಿನ ಹೇಳಿಕೆ ಪಡೆದುಕೊಂಡ ಬೆಳ್ಳಂದೂರು ಠಾಣೆ ಪೊಲೀಸರು, ಮಾರ್ಚ್ 1ರಂದು ಪ್ರಕರಣ ದಾಖಲಿಸಿಕೊಂಡಿದ್ದರು. ಸದ್ಯ ಗಂಡ ಮತ್ತು ಹೆಂಡತಿಯನ್ನು ಪೊಲೀಸರು ಕೌನ್ಸಿಲಿಂಗ್‌ಗೆ ಒಳಪಡಿಸಿದ್ದಾರೆ.

ಕೃತ್ಯ ಒಪ್ಪಿಕೊಂಡ ಪತ್ನಿ

ಕೃತ್ಯವೆಸಗಿರುವುದನ್ನು ಪತ್ನಿಯೂ ಒಪ್ಪಿಕೊಂಡಿದ್ದು, ತನ್ನ ತಾತ ತೀರಿಕೊಂಡಿದ್ದ ಕಾರಣ ಉಡುಗೊರೆ ನೀಡಲು ಸಾಧ್ಯವಾಗಿರಲಿಲ್ಲ ಎಂದು ದೂರುದಾರ ಸಹ ಒಪ್ಪಿಕೊಂಡಿದ್ದಾನೆ. ಇಬ್ಬರೂ ಪರಸ್ಪರ ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಅವಕಾಶ ನೀಡಲಾಗಿದೆ ಪೊಲೀಸರು ತಿಳಿಸಿದ್ದಾರೆ.

ಜಾಲತಾಣದಲ್ಲಿ ಖಾಸಗಿ ವಿಡಿಯೊ ಅಪ್ಲೋಡ್: ಪ್ರಕರಣ ದಾಖಲು

ಬೆಂಗಳೂರು: ಮಹಿಳೆಯೊಬ್ಬಳು ತನ್ನ ಪ್ರಿಯಕರನೊಂದಿಗೆ ಸೇರಿ ಲೈಂಗಿಕ ಚಟುವಟಿಕೆ ನಡೆಸಿ, ಚಿತ್ರೀಕರಿಸಿದ ವಿಡಿಯೊವನ್ನು ಪೋರ್ನ್ ವೆಬ್‌ಸೈಟ್‌ಗೆ ಅಪ್ಲೋಡ್ ಮಾಡುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದೆ.

ಅಪರಾಧ ಸುದ್ದಿಗಳು

ಈ ಬಗ್ಗೆ ಗುತ್ತಿಗೆದಾರ ಅಮರ್‌ನಾಥ್ ಎಂಬವರು ಐಟಿ ಆಕ್ಟ್ (ಮಾಹಿತಿ ತಂತ್ರಜ್ಞಾನ ಕಾಯಿದೆ) ಅಡಿಯಲ್ಲಿ ದೂರು ನೀಡಿದ್ದು, ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಣಗಳಿಸುವ ಉದ್ದೇಶದಿಂದ ಮಹಿಳೆ ಸೌಮ್ಯ ಆಕೆಯ ಪ್ರಿಯಕರ ರವಿ ರಾಮನಗರ ಎಂಬಾತನೊಂದಿಗೆ ಸೇರಿ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿದ್ದಾಳೆ. ಇದಕ್ಕಾಗಿಯೇ ಉಲ್ಲಾಳ ಉಪನಗರದ ಬಳಿ ಮನೆಯೊಂದನ್ನು ಬಾಡಿಗೆಗೆ ಪಡೆದುಕೊಂಡಿದ್ದಾರೆ. ಅಲ್ಲಿ ತಾವೇ ಲೈಂಗಿಕ ಚಟುವಟಿಕೆ ನಡೆಸಿ, ಅದನ್ನು ಚಿತ್ರೀಕರಿಸಿ ಪೋರ್ನ್ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಿದ್ದಾರೆ. ಇದರ ವಿಡಿಯೊ ಚಿತ್ರೀಕರಣಕ್ಕೆ ಮತ